ಉದ್ದವನ್ನು ಸ್ಪಷ್ಟ ನಾಲೆಗಳಲ್ಲಿ ಕೊನೆಗೊಳಿಸಲು ಅಥವಾ ಹೆಚ್ಚುವರಿ ಜಮೀನನ್ನು ನೀರಾವರಿಗೊಳಪಡಿಸಲು ವಿಸ್ತರಿಸಬೇಕಾದ ಪ್ರಸಂಗ ಅವಶ್ಯಕ ಹೆಚ್ಚುವರಿ ತೂಬುಗಳ ನಿರ್ಮಾಣ, ತೆಗೆದ ಮಣ್ಣಿನ ಗುಣಮಟ್ಟ ಅಸಮರ್ಪಕ ಎನಿಸಿದಲ್ಲಿ ಕ್ವಾರಿಗಳಿಂದ ತಂದು ಮಣ್ಣಿನ ಏರಿಯ ನಿರ್ಮಾಣ ಎಂಬಿತ್ಯಾದಿ ನೈಜ ಮತ್ತು ಅವಶ್ಯಕ ಕಾರಣಗಳಿಂದ ಟೆಂಡರ್ ಮೊತ್ತಗಳಲ್ಲಿ ಹೆಚ್ಚಳವಾಗಿರುತ್ತದೆ.

ಖ) ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 72 ರಿಂದ 95 ಹಾಗೂ ವಿತರಣಾ ಕಾಲುವೆ ಕಿ.ಮೀ. 9ರಿಂದ 18 ರಡಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ತ್ರಿ ಸದಸ್ಯರ ಸಮಿತಿ ಸನಿಖೆ ನಡೆಸಿ ಕಾಮಗಾರಿ ನಿರ್ವಹಣೆಯಲ್ಲಿ ಕಂಡು ಬಂದಂತಹ ಸಣ್ಣ ಲೋಪದೋಷ ನ್ಯೂನತೆ ಹಾಗೂ ದುರಸ್ತಿ ಕೆಲಸಗಳ ಕಾಮಗಾರಿಗಳನ್ನು ಅಂತಿಮಗೊಳಿಸುವ ಮುನ್ನ ಸರಿಪಡಿಸಿಕೊಳ್ಳುವಂತೆ ಅಭಿಪ್ರಾಯ ಪಟ್ಟಿರುತ್ತದೆ. ಒಟ್ಟಾರೆ ಸಮಿತಿಯು ಕಾಮಗಾರಿಯು ನಿರ್ವಹಣೆಯಲ್ಲಿ ಹಣ ದುರುಪಯೋಗವಾಗಿರುವುದಿಲ್ಲವೆಂದು ತಿಳಿಸಿರುತ್ತದೆ.

917 (1365) ಶ್ರೀ ಚರಂತಿಮಠ ವೀರಣ್ಣಚಂದ್ರ ಶೇಖರಯ್ಯ (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬಾಗಲಕೋಟೆಯ 41 ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇವರುಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ 18 ಪುನರ್ವಸತಿ ಕೇಂದ್ರಗಳಿದ್ದು ಈ ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಆ) ಮೇಲೆ ತಿಳಿಸಿರುವ ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಪ್ರತಿಯೊಂದು ಪುನರ್ವಸತಿ ಕೇಂದ್ರಗಳಲ್ಲಿ ನೀರು, ವಿದ್ಯುತ್ ಸರಬರಾಜು, ರಸ್ತೆ, ಚರಂಡಿ, ಸ್ಮಶಾನ, ಪಶುಚಿಕಿತ್ಸಾಲಯಗಳು ಶೌಚಾಲಯ, ದೋಬಿಘಾಟ್, ಶಾಲೆ ಗೃಹಗಳು ಇವೆ. ಪಂಚಾಯತ್ ಕಟ್ಟಡ ಪ್ರೌಡಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಪೋಲಿಸ್ ಠಾಣೆಗಳನ್ನು ದೊಡ್ಡ ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಿಸಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಎಲ್ಲಾ ಪುನರ್ವಸತಿ ಕೇಂದ್ರಗಳಲ್ಲಿ ಮೇಲೆ ತಿಳಿಸಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.